1–39 ಎ/ಗುಂ ವಿಸ್ತೀರ್ಣದಲ್ಲಿ ಹಲವಾರು ರೈತರು ಒತ್ತುವರಿ ಇರುವ ಕಾರಣ, 1–39 ಎ/ಗುಂ ಜಮೀನನ್ನು ಹಸ್ತಾಂತರಿಸಿರುವುದಿಲ್ಲ.

ಈ) ರಾಷ್ಟ್ರೀಯ ಆಯುರ್ವೇದ ಆಹಾರ ವಿಜ್ಞಾನ ಸಂಶೋಧನಾ ಸಂಸ್ಥೆಗೆ 4–11 ಎ/ಗುಂ ಪೈಕಿ 2–12 ಎ/ಗುಂ ಜಮೀನು ಹಸ್ತಾಂತರಮಾಡಲಾಗಿದ್ದು ಉಳಿದ 1–39 ಎ/ಗುಂ ಜಮೀನಿನಲ್ಲಿ ಒತ್ತುವರಿ ಇರುತ್ತದೆ. ಈ ಒತ್ತುವರಿದಾರರು 50–53ರಲ್ಲಿ ಅರ್ಜಿ ಸಲ್ಲಿಸಿರುವುದಿಲ್ಲ. ಆದ್ದರಿಂದ ನಿಯಮಾನುಸಾರ ಒತ್ತುವರಿ ತೆರವುಗೊಳಿಸಲು ಕ್ರಮಕೈಗೊಳ್ಳಲಾಗುವುದು.

ಸಣ್ಣ ನೀರಾವರಿ ಕೆರೆಗಳು

3109 (3796); ಡಾ: ಕೆ.ಶ್ರೀನಿವಾಸಮೂರ್ತಿ (ನೆಲಮಂಗಲ)

ಅ) ನೆಲಮಂಗಲ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಸಣ್ಣ ನೀರಾವರಿ ಕೆರೆಗಳ ಸಂಖ್ಯೆ ಎಷ್ಟು;

ಆ) 2013–14 ಮತ್ತು 2014–15ನೇ ಸಾಲಿನಲ್ಲಿ ಸಣ್ಣ ನೀರಾವರಿ ಕೆರೆಗಳ ಅಭಿವೃದ್ಧಿಗೆ ಬಿಡುಗಡೆಯಾಗಿರುವ ಅನುದಾನ ಎಷ್ಟು;

ಇ) ಈ ಹಿಂದೆ ನೆಲಮಂಗಲ ಕೆರೆ ಒಡೆದುಹೋದ ಸಂದರ್ಭದಲ್ಲಿ ಸರ್ಕಾರ ಕಾಮಗಾರಿಗೆ ಬಿಡುಗಡೆ ಮಾಡಿದ ಹಣವೆಷ್ಟು;

ಈ) ಒಡೆದು ಹೋದ ಕೆರೆಯ ಕೋಡಿ ಕಾಮಗಾರಿ ಸಂಪೂರ್ಣಗೊಂಡಿದೆಯೇ;

ಉ) ಈ ಕೆರೆಯಿಂದ ಹರಿದು ಹೋಗುವ ನೀರಿನ ರಾಜಕಾಲುವೆಯ ವಿಸ್ತೀರ್ಣ ಎಷ್ಟು ಹಾಗೂ ರಾಜ ಕಾಲುವೆ ಒತ್ತುವರಿ ಸರ್ವೆ ಕಾರ್ಯ ಪೂರ್ಣಗೊಂಡಿದೆಯೇ (ಸಂಪೂರ್ಣ ಮಾಹಿತಿ ನೀಡುವುದು)?

ಶ್ರೀ ಶಿವರಾಜ್ ಎಸ್. ತಂಗಡಗಿ (ಮಾನ್ಯ ಸಣ್ಣ ನೀರಾವರಿ ಸಚಿವರು)

ಅ) 21

ಆ) ನೆಲಮಂಗಲ ವಿಧಾನಸಭಾ ಕ್ಷೇತ್ರದಲ್ಲಿ ಬರುವ ಸಣ್ಣ ನೀರಾವರಿ ಇಲಾಖೆಯ ಕೆರೆಗಳ ಅಭಿವೃದ್ಧಿಗಾಗಿ 2013–14 ಸಾಲಿನಲ್ಲಿ ₹ 167.49 ಲಕ್ಷಗಳು ಮತ್ತು 2014–15ನೇ ಸಾಲಿನಲ್ಲಿ ₹ 75.15 ಲಕ್ಷಗಳು ವೆಚ್ಚ ಆಗಿರುತ್ತದೆ.

ಇ) ನೆಲಮಂಗಲ ಕೆರೆ ಒಡೆದುಹೋದ ಸಂದರ್ಭದಲ್ಲಿ ತಾತ್ಕಾಲಿಕ ದುರಸ್ತಿ ಕಾರ್ಯವನ್ನು ಕೈಗೊಂಡಿದ್ದು, ಯಾವುದೇ ಆರ್ಥಿಕ ವೆಚ್ಚವನ್ನು ಮಾಡಿರುವುದಿಲ್ಲ.

ಈ) ಸದರಿ ಕೆರೆಯನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಲು ₹ 360.00ಲಕ್ಷಗಳ ಅಂದಾಜು ಮೊತ್ತದೊಂದಿಗೆ 2014–15ನೇ ಸಾಲಿನ ಅಪೆಂಡಿಕ್ಸ್–ಇ ನಲ್ಲಿ ಅವಕಾಶ ಕಲ್ಪಿಸಲಾಗಿದೆ. ಈ ಕಾಮಗಾರಿಯ ಅಂದಾಜಿಗೆ ನಿಯಮಾನುಸಾರ ಮಂಜೂರಾತಿ ನೀಡಿ ಕೈಗೊಳ್ಳಲಾಗುವುದು.

ಉ) ನೆಲಮಂಗಲ ಕೆರೆಯ ರಾಜಕಾಲುವೆಯ ಒತ್ತುವರಿ ಸರ್ವೆ ಕಾರ್ಯವನ್ನು ಕೈಗೊಳ್ಳಬೇಕಾಗಿರುತ್ತದೆ.

ನೋಂದಣಿಯಾಗಿರುವ ಕಾರ್ಮಿಕರು

3110 (2445); ಶ್ರೀ. ಡಾ: ರಫೀಕ್ ಅಹ್ಮದ್ ಎಸ್. (ತುಮಕೂರು ನಗರ)

ಅ) ರಾಜ್ಯದಲ್ಲಿ ನೋಂದಣಿ ಮಾಡಿಸಿರುವ ಕಾರ್ಮಿಕರ ಸಂಖ್ಯೆ ಎಷ್ಟು (ಜಿಲ್ಲಾವಾರು ವಿವರ ನೀಡುವುದು);

ಆ) ತುಮಕೂರು ನಗರದಲ್ಲಿ ನೋಂದಣಿ ಮಾಡಿಸಿರುವ ಕಾರ್ಮಿಕರ ಸಂಖ್ಯೆ ಎಷ್ಟು;

ಇ) ಕಾರ್ಮಿಕರಿಗೆ ಸರ್ಕಾರದಿಂದ ಕೊಡುತ್ತಿರುವ ಸೌಲಭ್ಯಗಳೇನು?

ಶ್ರೀ ಪಿ.ಟಿ. ಪರಮೇಶ್ವರ ನಾಯ್ಕ (ಮಾನ್ಯ ಕಾರ್ಮಿಕ ರಾಜ್ಯ ಸಚಿವರು)

ಅ) ಇಲಾಖೆಯಲ್ಲಿ ಎಲ್ಲಾ ಕಾರ್ಮಿಕರನ್ನು ನೋಂದಣಿ ಮಾಡುವ ವ್ಯವಸ್ಥೆ ಇರುವುದಿಲ್ಲ. ಆದರೆ, ಇಲಾಖಾ ವತಿಯಿಂದ ಅನುಷ್ಠಾನಗೊಳಿಸುತ್ತಿರುವ